# ಸ್ವಾತಂತ್ರ್ಯ ಹೋರಾಟಗಾರರ ವೀರಸೌಧ ಕಟ್ಟಡ ಸಮಿತಿ

# (ಸಮುದಾಯ ಭವನ)


**ಸಂಪರ್ಕಿಸಬೇಕಾದ ವಿಳಾಸ : ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು**

ಬೆಳಗುಂಬ ರಸ್ತೆ, ತುಮಕೂರು – 572 103, ದೂರವಾಣಿ ಸಂಖ್ಯೆ 0816–2272280

**email : tudatmk2009@yahoo.co.in, website : tuda.co.in.**


## ಬಹಿರಂಗ ಹರಾಜು ಪ್ರಕಟಣೆ

ಕ್ರಮಾಂಕ ಟಿಯುಡಿಎ/ವೀರಸೌಧ/ಮಳಿಗೆ ಹರಾಜು/02/2012–13 ದಿನಾಂಕ : 17–10–2012

ಸ್ವಾತಂತ್ರ್ಯ ಹೋರಾಟಗಾರರ ಸಂಘವು ವೀರಸೌಧ ಕಟ್ಟಡದ ಸಮುದಾಯ ಭವನದಲ್ಲಿ ನಿರ್ಮಿಸಿರುವ ಈ ಕೆಳಕಾಣಿಸಿದ ವಾಣಿಜ್ಯ ಮಳಿಗೆಗಳನ್ನು ಸ್ಥಳದಲ್ಲಿಯೇ ಬಹಿರಂಗ ಹರಾಜು ಮಾಡುವ ಮೂಲಕ ಮಾಸಿಕ ಪರವಾನಗಿ ಶುಲ್ಕ ನಿರ್ಧರಿಸಿ ವಿಲೇ ಮಾಡಲು ಉದ್ದೇಶಿಸಿರುತ್ತದೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಿದೆ.

## ದಿನಾಂಕ 07–11–2012ರ ಬೆಳಗ್ಗೆ 11–00 ಗಂಟೆಗೆ

| ಕ್ರಮ ಸಂಖ್ಯೆ | ಮಳಿಗೆಗಳ ವಿವರಗಳು | ಮಳಿಗೆಗಳ ಸಂಖ್ಯೆ | ಅಳತೆಗಳು | | | | ವಿಸ್ತೀರ್ಣ ಚ.ಮೀ.ಗಳಲ್ಲಿ |
|---|---|---|---|---|---|---|---|
| | | | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ | |
| 1 | C1, C2, C3, C4, C6, C7, C8 | 7 | 4.20 | 4.20 | 3.10 | 3.10 | **13.02** |
| 2 | G2, G3, G5, G6 | 4 | 4.20 | 4.20 | 3.10 | 3.10 | **13.02** |

### ಹರಾಜಿನಲ್ಲಿ ಭಾಗವಹಿಸಲು ಪ್ರಾಥಮಿಕ ಅರ್ಹತೆಗಳು

1. ಬಾಳನಕಟ್ಟೆ ಬಳಿಯ ವೀರಸೌಧ ಕಟ್ಟಡದ ಸಮುದಾಯ ಭವನದಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ದಿನಾಂಕ 07–11–2012ರಂದು ಬೆಳಿಗ್ಗೆ 11.00 ಗಂಟೆಗೆ ಬಹಿರಂಗ ಹರಾಜನ್ನು ವೀರಸೌಧ ಕಟ್ಟಡದ ಬಳಿ ನಡೆಸಲಾಗುವುದು. ಹರಾಜಿನಲ್ಲಿ ಭಾಗವಹಿಸುವವರು ರೂ.50,000 ಗಳಿಗೆ ಡಿ.ಡಿ. ರೂಪದಲ್ಲಿ ದಿನಾಂಕ 07–11–2012 ರಂದು ಬೆಳಗ್ಗೆ 10.30 ಗಂಟೆಯೊಳಗಾಗಿ ಹರಾಜು ಸ್ಥಳದಲ್ಲಿ ತೆರೆದಿರುವ ಕೌಂಟರ್‌ನಲ್ಲಿ ಅರ್ಜಿ ಮತ್ತು ಎರಡು ಬಾವಚಿತ್ರ ಹಾಗೂ ಬಾವಚಿತ್ರವುಳ್ಳ ಗುರುತಿನ ಚೀಟಿಯೊಂದಿಗೆ ಪಾವತಿಸಿ ಟೋಕನ್ ಪಡೆಯುವುದು.
2. ಒಂದಕ್ಕಿಂತ ಹೆಚ್ಚಿನ ಅಂಗಡಿ ಮಳಿಗೆಗಳನ್ನು ಪಡೆಯಲು ಇಚ್ಛಿಸುವವರು ಪ್ರತಿ ಮಳಿಗೆಗೆ ರೂ.50,000 ಗಳನ್ನು ಪ್ರಾರಂಭಿಕ ಠೇವಣಿ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದಾಗಿರುತ್ತದೆ.
3. ಹರಾಜಿನಲ್ಲಿ ಮಳಿಗೆಗಳು ಅವರ ಹೆಸರಿಗೆ ನಿಲ್ಲುವವರೆಗೆ ಉಳಿದ ಮಳಿಗೆಗಳ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು.
4. ಬಹಿರಂಗ ಹರಾಜಿನಲ್ಲಿ ಮಳಿಗೆ ಪಡೆದವರು ಮಾಹೆಯಾನ ಪರವಾನಗಿ ಶುಲ್ಕ ಮತ್ತು ಹಿಂದಿರುಗಿಸುವ ಠೇವಣಿಯನ್ನು ಪಾವತಿಸಬೇಕಿರುತ್ತದೆ.
5. ಹರಾಜಾದ ನಂತರ ಬಿಡ್‌ನ (ಗರಿಷ್ಠ ಮೊತ್ತ) 10 ತಿಂಗಳ ಮಾಸಿಕ ಪ್ರೀಮಿಯಂನ್ನು ಮಾಸಿಕ ಪ್ರೀಮಿಯಂ ಮುಂಗಡವಾಗಿ (ಮರುಪಾವತಿ ಮೊತ್ತ) 48 ಗಂಟೆಯೊಳಗಾಗಿ ಪಾವತಿಸುವುದು
6. ಹರಾಜಿನಲ್ಲಿ ಭಾಗವಹಿಸಿದವರು ಬಿಡ್ ಮಾಡಿದ ಗರಿಷ್ಠ ಬಿಡ್ ಮೊತ್ತವನ್ನು ಮಾಹೆಯಾನ ಪ್ರೀಮಿಯಂ ಎಂದು ಪರಿಗಣಿಸಲಾಗುವುದು.
7. ಮರುಪಾವತಿಸಲಾಗುವ ಠೇವಣಿಯನ್ನು ಸ್ಥಿರೀಕರಣದ ನಂತರ ತಿಳುವಳಿಕೆ ನೀಡಿದ ನಂತರ 15 ದಿನಗಳೊಳಗಾಗಿ ಪಾವತಿಸುವುದು.
8. ಕನಿಷ್ಠ ನಿಗದಿತ ಪರವಾನಗಿ ಶುಲ್ಕವು ರೂ.5941 ಅಥವಾ ರೂ.452 ಪ್ರತಿ ಚದುರ ಮೀಟರ್ ದರದಂತೆ ನಿಗದಿಪಡಿಸಲಾಗಿದೆ.
9. ಯಶಸ್ವಿ ಬಿಡ್‌ದಾರರ ಪ್ರಾರಂಭಿಕ ಠೇವಣಿ (ಕ್ರಮ ಸಂಖ್ಯೆ 2 ರಂತೆ) ಮೊಬಲಗನ್ನು ತಾತ್ಕಾಲಿಕವಾಗಿ ಸ್ವೀಕರಿಸಲಾಗಿರುತ್ತದೆ. ಆಡಳಿತಾತ್ಮಕ ಅನುಮೋದನೆ ಪಡೆದ ನಂತರದ ಸ್ಥಿರೀಕರಣಕ್ಕೆ ಒಳಪಟ್ಟಿರುತ್ತದೆ.
10. ಬಿಡ್‌ದಾರರು ಮಾಸಿಕ ಪರವಾನಗಿ ಶುಲ್ಕಕ್ಕೆ ಮಾತ್ರ ಬಿಡ್ ಮಾಡಬೇಕಿರುತ್ತದೆ. ಹಿಂತಿರುಗಿಸುವ ಪ್ರೀಮಿಯಂ ಮೊತ್ತ ರೂ.5 ಲಕ್ಷಗಳಾಗಿರುತ್ತದೆ.
11. ಕ್ರಮ ಸಂಖ್ಯೆ 8 ರಲ್ಲಿನ ಕನಿಷ್ಠ ಪರವಾನಗಿ ಶುಲ್ಕಕ್ಕಿಂತ ಹೆಚ್ಚು ಅಂದರೆ ರೂ.5941 ಕ್ಕಿಂತ ಹೆಚ್ಚಿಗೆ ಬಿಡ್ ಮಾಡಿದಲ್ಲಿ ಮಾತ್ರ ಮಳಿಗೆಗಳನ್ನು ಮಾಸಿಕ ಪ್ರೀಮಿಯಂ ಆಧಾರದ ಮೇಲೆ ಗರಿಷ್ಠ ಬಿಡ್ ಮಾಡಿದವರಿಗೆ ನೀಡಲಾಗುವುದು.

### ಷರತ್ತುಗಳು

1. ಬಹಿರಂಗ ಹರಾಜನ್ನು ಆಯಾಯ ವಾಣಿಜ್ಯ ಸಂಕೀರ್ಣಗಳು ಇರುವ ಸ್ಥಳಗಳಲ್ಲಿ ನಿಗದಿಪಡಿಸಿದ ದಿನಾಂಕ ಮತ್ತು ಸಮಯದಲ್ಲಿ ವೀರಸೌಧದ ಕಟ್ಟಡ ಸಮಿತಿ ಅಥವಾ ಅವರಿಂದ ಅಧಿಕಾರ ಪಡೆದವರು, ಮಳಿಗೆಗಳನ್ನು ಕ್ರಮ ಸಂಖ್ಯೆ ರೀತ್ಯಾ ಹರಾಜು ಮಾಡಲಾಗುವುದು.
2. ವಾಣಿಜ್ಯ ಮಳಿಗೆಗಳಿಗೆ ಅತ್ಯಂತ ಹೆಚ್ಚಿನ ಬಿಡ್ಡುದಾರರನ್ನು ತಾತ್ಕಾಲಿಕವಾಗಿ ಅಂಗೀಕರಿಸಿ, 8 ವರ್ಷಕ್ಕೆ ಪರವಾನಗಿಯನ್ನು ವೀರಸೌಧದ ಕಟ್ಟಡ ಸಮಿತಿಯಿಂದ ಮಂಜೂರು ಮಾಡಿಕೊಡಲಾಗುವುದು. ತದನಂತರ ಯಶಸ್ವಿ ಬಿಡ್ಡುದಾರರ ಖರ್ಚಿನಲ್ಲಿ ನೊಂದಣಿ ಮಾಡಿಕೊಡಲಾಗುವುದು ಹಾಗೂ 8 ವರ್ಷಗಳ ನಂತರ ಯಾವುದೇ ತಂಟೆ ತಕರಾರು ಮಾಡದೆ ಮಳಿಗೆಗಳು ಹೇಗೆ ಪಡೆಯಲಾಗಿತ್ತೋ, ಅದೇ ಸ್ಥಿತಿಯಲ್ಲಿ ಮಳಿಗೆಗಳನ್ನು ವೀರಸೌಧದ ಕಟ್ಟಡ ಸಮಿತಿಯ ಸುಪರ್ದಿಗೆ ನೀಡಿ ಹಿಂದಿರುಗಿರುವ ಠೇವಣಿ ವಾಪಸ್ಸು ಪಡೆಯಬಹುದು.
3. ಅಂಗೀಕೃತ ಬಿಡ್ಡುದಾರರ ಪ್ರೀಮಿಯಂ ಮುಂಗಡವನ್ನು ಗುತ್ತಿಗೆ ಅವಧಿ ಮುಗಿದ ನಂತರ ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು.
4. ಬಾಡಿಗೆದಾರರು ಗುತ್ತಿಗೆ ಅವಧಿ ಪೂರ್ಣಗೊಳ್ಳುವ ಮೊದಲೇ ಮಳಿಗೆಯನ್ನು ತೆರವುಗೊಳಿಸಲು ಇಚ್ಛಿಸಿದ್ದಲ್ಲಿ ಮರುಪಾವತಿಯ ಠೇವಣಿಯನ್ನು ಈ ಕೆಳಕಂಡಂತೆ ಪಾವತಿಸಲಾಗುವುದು.
   * ಗುತ್ತಿಗೆದಾರರು 3 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಛಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 50 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಗುತ್ತಿಗೆದಾರರು 3 ರಿಂದ 5 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಛಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 30 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಗುತ್ತಿಗೆದಾರರು 5 ರಿಂದ 7 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಛಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 20 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
   * ಗುತ್ತಿಗೆದಾರರು 7 ರಿಂದ 8 ವರ್ಷದೊಳಗೆ ಗುತ್ತಿಗೆ ಅವಧಿಯ ಮಳಿಗೆಯನ್ನು ತೆರವುಗೊಳಿಸಲು ಇಚ್ಛಿಸಿದ್ದಲ್ಲಿ ಮರುಪಾವತಿಯ ಠೇವಣಿಯ ಒಟ್ಟು ಮೊತ್ತದಲ್ಲಿ ಶೇಕಡ 12 ರಷ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5. ವಾಣಿಜ್ಯ ಮಳಿಗೆಗಳ ಅತ್ಯಂತ ಹೆಚ್ಚಿನ ಬಿಡ್ಡುದಾರರು ಪ್ರಾರಂಭಿಕ ಠೇವಣಿಯನ್ನು ಪಾವತಿಸಿದ್ದು, ಸ್ಥಿರೀಕರಣದ ನಂತರ ನೀಡುವ ತಿಳುವಳಿಕೆಗನುಗುಣವಾಗಿ ಮರು ಪಾವತಿಸಲಾಗುವ ರೂ.5,00,000 ಗಳನ್ನು ಪಾವತಿಸಬೇಕಾಗುತ್ತದೆ. ಒಂದು ವೇಳೆ ವಿಫಲವಾದಲ್ಲಿ ಪ್ರಾರಂಭಿಕ ಠೇವಣಿ (ರೂ.50,000) ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಾವುದೇ ಕಾರಣಕ್ಕೂ ಅವಧಿ ವಿಸ್ತರಿಸುವುದಿಲ್ಲ.
6. ವಾಣಿಜ್ಯ ಮಳಿಗೆಗಳಿಗಾಗಿ ಅರ್ಜಿ ಜೊತೆಯಲ್ಲಿ ಪ್ರಾರಂಭಿಕ ಠೇವಣಿ ಮೊತ್ತ ಪಾವತಿಸಿದಲ್ಲಿ ಮಾತ್ರ ಬಹಿರಂಗ ಹರಾಜಿನಲ್ಲಿ ಭಾಗವಹಿಸಲು ಅನುಮತಿ ನೀಡಲಾಗುವುದು. ಬಹಿರಂಗ ಹರಾಜಿನಲ್ಲಿ ಯಶಸ್ವಿಯಾಗದ ಬಿಡ್ಡುದಾರರಿಗೆ ಪಾವತಿಸಿದ ಪ್ರಾರಂಭಿಕ ಠೇವಣಿಯನ್ನು ಮರುಪಾವತಿ ಮಾಡಲಾಗುವುದು.
7. ಬಹಿರಂಗ ಹರಾಜಿನ ಯಶಸ್ವಿ ಬಿಡ್ಡುದಾರರಿಗೆ ಮಳಿಗೆ ಗುತ್ತಿಗೆ ಕರಾರು ಆದ ದಿನಾಂಕದಿಂದ ಮಾಸಿಕ ಪರವಾನಗಿ ಶುಲ್ಕವನ್ನು ವಸೂಲಿಗೆ ಪರಿಗಣಿಸಲಾಗುವುದು.
8. ಯಶಸ್ವಿ ಬಿಡ್ಡುದಾರರು ಕಟ್ಟಡದ ಮಳಿಗೆಗಳನ್ನು ವೀರಸೌಧದ ಕಟ್ಟಡ ಸಮಿತಿಯವರ ಸೂಕ್ತ ಅನುಮತಿ ಪಡೆಯದೇ ಬೇರೆ ವ್ಯಕ್ತಿಗಳಿಗೆ ಮರು ಗುತ್ತಿಗೆ (Sub lease) ಮಾಡತಕ್ಕದ್ದಲ್ಲ. ಈ ಬಗ್ಗೆ ಅಗತ್ಯ ದಾಖಲೆಗಳು ಲಭ್ಯವಾದಲ್ಲಿ ಯಾವುದೇ ಸೂಚನೆ ನೀಡದೇ ಮಳಿಗೆಯನ್ನು ವಶಪಡಿಸಿಕೊಳ್ಳಲಾಗುವುದು.
9. ಕಟ್ಟಡದ ಮಳಿಗೆಗಳಲ್ಲಿ ಸ್ಫೋಟಕ ವಸ್ತುಗಳನ್ನು ಮತ್ತು ಮದ್ಯ ಮಾಂಸ ಮಾರಾಟ ಮಾಡಬಾರದು ಹಾಗೂ ಕಾನೂನು ಬಾಹಿರ ವ್ಯಾಪಾರಗಳನ್ನು ಮಾಡಬಾರದು. ಈ ಅಧಿಕಾರನನ್ನು ವೀರಸೌಧದ ಕಟ್ಟಡ ಸಮಿತಿ ಕಾಯ್ದಿರಿಸಿಕೊಂಡಿರುತ್ತೆ. ವ್ಯಾಪಾರ ಪ್ರಾರಂಭಿಸುವ ಮುನ್ನಾ ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಂದ ಕಾನೂನು ಪ್ರಕಾರ ಉದ್ದಿಮೆ ಪರವಾನಗಿ ಪಡೆದು ಮಳಿಗೆ ಬಳಸಿಕೊಳ್ಳತಕ್ಕದ್ದು. ಈ ದಾಖಲೆಗಳನ್ನು ವೀರಸೌಧ ಕಟ್ಟಡ ಸಮಿತಿಗೆ ನೀಡತಕ್ಕದ್ದು.
10. ಮಂಜೂರಾದ ಮಳಿಗೆಗಳ ಮೇಲೆ ಹೆಚ್ಚುವರಿ ಕಟ್ಟಡ ಕಟ್ಟುವ ಹಕ್ಕನ್ನು ವೀರಸೌಧದ ಕಟ್ಟಡ ಸಮಿತಿ ರವರು ಕಾಯ್ದಿರಿಸಿಕೊಂಡಿರುತ್ತದೆ. ಈ ಬಗ್ಗೆ ಗುತ್ತಿಗೆದಾರರು ಯಾವುದೇ ತಂಟೆ ತಕರಾರು ಮಾಡಲು ಅವಕಾಶವಿರುವುದಿಲ್ಲ.
11. ಹರಾಜು ಪಡೆದು ಮಳಿಗೆಗಳಿಗೆ ಮಾಹೆಯಾನ ವಿದ್ಯುಚ್ಛಕ್ತಿ ಶುಲ್ಕವನ್ನು, ಸರ್ಕಾರದ ಶುಲ್ಕಗಳು, ಉದ್ದಿಮೆ ಶುಲ್ಕ ಇತರೇ ಕಟ್ಟಡ ನಿರ್ವಹಣಾ ಶುಲ್ಕ ಮುಂತಾದವುಗಳನ್ನು ಗುತ್ತಿಗೆದಾರರು ಮಾಸಿಕವಾಗಿ ಪಾವತಿಸಬೇಕು.
12. ಗುತ್ತಿಗೆದಾರನ ಮಾಸಿಕ ಪ್ರೀಮಿಯಂ ಮೊತ್ತವನ್ನು ಮುಂದಿನ ತಿಂಗಳ 10ನೇ ತಾರೀಖಿನೊಳಗೆ ಪಾವತಿ ಮಾಡದಿದ್ದಲ್ಲಿ ಶೇಕಡ 2 ರಷ್ಟು ಬಡ್ಡಿ ವಿಧಿಸಿ ವಸೂಲಿ ಮಾಡಲಾಗುವುದು. ಒಂದು ವೇಳೆ ಪ್ರೀಮಿಯಂ ಮೊತ್ತವನ್ನು ನಿರಂತರವಾಗಿ 6 ತಿಂಗಳ ಕಾಲ ಪಾವತಿಸದಿದ್ದಲ್ಲಿ ಮಳಿಗೆಯ ಕರಾರು ಪತ್ರವನ್ನು ವಜಾ ಮಾಡಲಾಗುವುದು ಹಾಗೂ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಒಂದು ವೇಳೆ ಗುತ್ತಿಗೆದಾರರು ಮಳಿಗೆಯನ್ನು ಮರು ಗುತ್ತಿಗೆಗೆ ನೀಡಿದ್ದಲ್ಲಿ, ಕರಾರು ಪತ್ರವನ್ನು (ಅಮಾನತ್ತಿನಲ್ಲಿಟ್ಟು) ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಕರಾರು ಪತ್ರವನ್ನು ರದ್ದುಪಡಿಸಲು ಕ್ರಮಕೈಗೊಳ್ಳಲಾಗುವುದು.
13. ಮಾಸಿಕ ಪ್ರೀಮಿಯಂನ್ನು ಪ್ರತಿ ಮಳಿಗೆಗೆ ಎರಡು ವರ್ಷಗಳಿಗೊಮ್ಮೆ ಶೇಕಡ 10 ರಷ್ಟನ್ನು ಹೆಚ್ಚಿಸಲಾಗುವುದು ಹಾಗೂ ಈ ಮೇಲ್ಕಂಡ ಎಲ್ಲಾ ಷರತ್ತುಗಳಿಗೆ ಒಪ್ಪಿ ವೀರಸೌಧ ಕಟ್ಟಡ ಸಮಿತಿಯೊಂದಿಗೆ ಒಪ್ಪಂದ ಪತ್ರ ಮಾಡಿಕೊಂಡು ಹಾಗೂ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಮಾಸಿಕ ಪ್ರೀಮಿಯಂದಾರರ ಖರ್ಚಿನಲ್ಲಿ ಕಡ್ಡಾಯವಾಗಿ ನೊಂದಾಯಿಸಿಕೊಡತಕ್ಕದ್ದು.
14. ಹರಾಜಿನಲ್ಲಿ ಬಿಡ್ಡುದಾರರು ಅಥವಾ ಅವರ ಪರವಾಗಿ ಅಧಿಕಾರ ಪತ್ರ (ಜಿ.ಪಿ.ಎ.ಹೋಲ್ಡರ್) ಹೊಂದಿರುವವರು ಮಾತ್ರ ಭಾಗವಹಿಸತಕ್ಕದ್ದು.
15. ಮೇಲ್ಕಂಡ ಷರತ್ತುಗಳಲ್ಲಿ ಯಾವುದೇ ಷರತ್ತನ್ನು ರದ್ದುಪಡಿಸುವ / ಸೇರ್ಪಡೆಗೊಳಿಸುವ ಹಕ್ಕನ್ನು ವೀರಸೌಧ ಕಟ್ಟಡ ಸಮಿತಿ ಹೊಂದಿರುತ್ತದೆ.
16. ಗುತ್ತಿಗೆದಾರರು ಕಾಲಾನುಕಾಲಕ್ಕೆ ಜಾರಿಯಾಗಬಹುದಾದ ನಿಯಮಗಳಿಗೆ ಬದ್ಧರಾಗಿತಕ್ಕದ್ದು.
17. ವೀರಸೌಧ ಕಟ್ಟಡ ಸಮಿತಿ ಸದಸ್ಯರ ಅಥವಾ ನಿಯೋಜಿತ ಸಿಬ್ಬಂದಿ ಯಾವುದೇ ಸಂದರ್ಭದಲ್ಲಿ ಮಳಿಗೆಗಳನ್ನು ವ್ಯಾಪಾರ / ಚಟುವಟಿಕೆಗಳನ್ನು ಪರಿಶೀಲಿಸಿ / ವೀಕ್ಷಿಸಲು ಅಧಿಕಾರ ಹೊಂದಿರುತ್ತಾರೆ.
18. ಮೇಲ್ಕಂಡ ಷರತ್ತುಗಳಲ್ಲಿ ಯಾವುದೇ ಷರತ್ತನ್ನು ರದ್ದುಪಡಿಸುವ ಹಕ್ಕನ್ನು ಜಿಲ್ಲಾಧಿಕಾರಿಗಳು ಹಾಗೂ ವೀರಸೌಧ ಕಟ್ಟಡ ಸಮಿತಿ ಅಧ್ಯಕ್ಷರು ಕಾಯ್ದಿರಿಸಿಕೊಂಡಿರುತ್ತಾರೆ.
19. ವೀರಸೌಧ ಕಟ್ಟಡ ಸಮಿತಿಯ ತೀರ್ಮಾನದಂತೆ (G-1) ಒಂದು ಮಳಿಗೆಯನ್ನು ಖಾದಿ ಮತ್ತು ಗ್ರಾಮೋದ್ಯೋಗ ವಸ್ತ್ರ ಬಂಡಾರಕ್ಕಾಗಿ ಕಾಯ್ದಿರಿಸಿರುತ್ತದೆ.

ಸಹಿ/–
ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು.

ಸಹಿ/–
ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ
ವೀರಸೌಧ ಕಟ್ಟಡ ಸಮಿತಿ, ತುಮಕೂರು.